# ಹಕ್ಕಿ ಹಾರಿತು, ನಾಯಿ ಬೊಗಳಿತು ಇದು ಟ್ವಿಟರ್ ಹೊಸ ಅವತಾರ

**ಟ್ವಿಟರ್ ಲೋಗೊ ಬದಲಿಸುವ ಬಗ್ಗೆ ಈ ಹಿಂದೆಯೇ ಸುಳಿವು ನೀಡಿದ್ದ ಎಲಾನ್ ಮಸ್ಕ್, ಕಡೆಗೂ ಟ್ವಿಟರ್‌ನ ಡೆಸ್ಕ್‌ಟಾಪ್ ಆವೃತ್ತಿಯಲ್ಲಿ ಹಾರುವ ಹಕ್ಕಿಯ ಲೋಗೊ ಜಾಗಕ್ಕೆ ಬೊಗಳುವ ನಾಯಿಯನ್ನು ತಂದು ಕೂರಿಸಿದ್ದಾರೆ.**

ಶಶಿಕುಮಾರ್ ಸಿ.

ಟ್ವಿಟರ್ ಕಂಪನಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಬಳಿಕ ಹಲವು ಹುಚ್ಚಾಟಗಳಿಂದ ಸುದ್ದಿಯಲ್ಲಿದ್ದ ಎಲಾನ್ ಮಸ್ಕ್ ಈಗ ಬೊಗಳುವ ನಾಯಿಯ ವಿಚಾರಕ್ಕೆ ಮತ್ತೆ ಸುದ್ದಿಯಲ್ಲಿದ್ದಾರೆ. ಮುದ್ದಾದ ಬ್ಲೂ ಬರ್ಡ್ ಜಾಗಕ್ಕೆ ನಾಯಿಯನ್ನು ತಂದು ಕೂರಿಸಿ, ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದ್ದಾರೆ.

ಈಚೆಗೆ, 'ಟ್ವಿಟರ್‌ಗೆ ಹೊಸ ಸಿಇಒ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ) ಹುಡುಕಾಡುತ್ತಿದ್ದೇನೆ' ಎಂದಿದ್ದ ಎಲಾನ್ ಮಸ್ಕ್, ನಾಯಿಯ ಚಿತ್ರವೊಂದನ್ನು ಟ್ವಿಟರ್ ಡಿಪಿಯನ್ನಾಗಿಸಿ ಸುದ್ದಿಯಲ್ಲಿದ್ದರು. ಈಗ ಇದೀಗ ಟ್ವಿಟರ್ ವೆಬ್ ಆವೃತ್ತಿಯ ಲೋಗೊವನ್ನೇ ಬದಲಿಸಿದ್ದಾರೆ. ಮೊದಲಿದ್ದ 'ನೀಲಿ ಹಕ್ಕಿ'ಯ ಬದಲಿಗೆ ನಾಯಿಗಳ ಮೀಮ್‌ಗಳಲ್ಲಿ ಅಥವಾ ಕ್ರಿಪ್ಟೋ ಕರೆನ್ಸಿಯಲ್ಲಿ ಬಳಕೆಯಾಗುತ್ತಿದ್ದ 'ನಾಯಿ' ಚಿತ್ರವನ್ನು ಹಾಕಿದ್ದಾರೆ.

ಟ್ವಿಟರ್ ಲೋಗೊ ಬದಲಾವಣೆಯು ಕೇವಲ ವೆಬ್ ಆವೃತ್ತಿಗೆ ಅನ್ವಯಿಸಲಿದ್ದು, ಮೊಬೈಲ್ ಆವೃತ್ತಿಯ ಟ್ವಿಟರ್ ಆ್ಯಪ್‌ನಲ್ಲಿ ಹಕ್ಕಿಯ ಲೋಗೊ ಹಾಗೇ ಉಳಿಯಲಿದೆ. ಟ್ವಿಟರ್ ವೆಬ್ ಆವೃತ್ತಿಯಲ್ಲಿ ಬಳಸಿರುವ ನಾಯಿ ಚಿತ್ರವನ್ನು ಹತ್ತು ವರ್ಷಗಳ ಹಿಂದೆ ಬಿಟ್‌ಕಾಯಿನ್‌ನಂತಹ ಇತರ ಕ್ರಿಪ್ಟೋಕರೆನ್ಸಿಗಳನ್ನು ಅಪಹಾಸ್ಯ ಮಾಡುವ ಉದ್ದೇಶದಿಂದ ರಚಿಸಲಾಗಿತ್ತು. ಇದೀಗ ಅದನ್ನೇ ಟ್ವಿಟರ್ ಲೋಗೊವಾಗಿಯೂ ಬಳಸಲಾಗಿದೆ.

ಈ ಕುರಿತು ಟ್ವೀಟ್ ಮಾಡಿದ್ದ ಮಸ್ಕ್, ಹೊಸ ಲೋಗೊಗೆ ಸಂಬಂಧಿಸಿದಂತೆ ಫೋಟೊ ಹಂಚಿಕೊಂಡಿದ್ದರು. ನಾಯಿಯೊಂದು ತನ್ನ ಕಾರು ಚಲಾಯಿಸಿಕೊಂಡು ಹೋಗುತ್ತಿರುವಾಗ ಪೊಲೀಸರು ಅದನ್ನು ಅಡ್ಡಗಟ್ಟಿ ಐಡಿ ಕಾರ್ಡ್ ಪರಿಶೀಲಿಸುತ್ತಾರೆ. ನಾಯಿಯ ಐಡಿ ಕಾರ್ಡ್‌ನಲ್ಲಿದ್ದ ಫೋಟೊದಲ್ಲಿ ನೀಲಿ ಹಕ್ಕಿಯ ಚಿತ್ರವಿರುತ್ತದೆ. ಈ ಬಗ್ಗೆ ಪ್ರಶ್ನಿಸಿದ ಪೊಲೀಸ್ ಸಿಬ್ಬಂದಿಗೆ 'ಅದು ನನ್ನ ಹಳೆಯ ಫೋಟೊ' ಎಂದು ನಾಯಿ ಉತ್ತರಿಸುತ್ತದೆ. ಕುಚೋದ್ಯದಂತಿರುವ ನಾಯಿ ಮತ್ತು ಪೊಲೀಸರ ನಡುವಿನ ಸಂಭಾಷಣೆಯು ಟ್ವಿಟರ್‌ನ ಇಂದಿನ ಪರಿಸ್ಥಿತಿಗೆ ಹಿಡಿದ ಕನ್ನಡಿಯಂತಿದೆ.

ಕುಚೋದ್ಯದ ಮುಂದುವರೆದ ಭಾಗದಂತೆ ಈ ಹಿಂದೆಯೂ ಎಲಾನ್, 'ಟ್ವಿಟರ್ ಸಿಇಒ ಬದಲಾಗಿದ್ದಾರೆ' ಎಂದು, ನಾಯಿ ಸಿಇಒ ಸೀಟ್‌ನಲ್ಲಿ ಕುಳಿತುಕೊಂಡಿರುವಂತೆ ಫೋಟೊವೊಂದನ್ನು ಹಂಚಿಕೆ ಮಾಡಿದ್ದರು. ಇದೀಗ ನಾಯಿಯ ಫೋಟೊವನ್ನೆ ಲೋಗೊ ಆಗಿ ಬದಲಾಯಿಸಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.




### ಭರವಸೆ ಈಡೇರಿಸಿದ ಮಸ್ಕ್

2022ರ ಮಾರ್ಚ್‌ನಲ್ಲಿನ ಟ್ವೀಟ್ ಸ್ಕ್ರೀನ್‌ಶಾಟ್‌ವೊಂದನ್ನು ಎಲಾನ್ ಮಸ್ಕ್ ಈಚೆಗೆ ಹಂಚಿಕೊಂಡಿದ್ದಾರೆ. ಅದರಲ್ಲಿ ಟ್ವಿಟರ್ ಬಳಕೆದಾರರೊಬ್ಬರು, ಪಕ್ಷಿ ಲೋಗೊವನ್ನು 'ನಾಯಿ' ಚಿತ್ರಕ್ಕೆ ಬದಲಾಯಿಸುವಂತೆ ಟ್ವೀಟ್ ಮಾಡಿದ್ದರು. ಅದಕ್ಕೆ, 'ಖಂಡಿತ' ಎಂದು ಟ್ವೀಟ್ ಮೂಲಕ ಅದಕ್ಕೆ ಉತ್ತರಿಸಿರುವ ಮಸ್ಕ್, ಟ್ವೀಟಿಗನಿಗೆ ನೀಡಿದ್ದ ಭರವಸೆಯನ್ನು ಈಗ ಈಡೇರಿಸಿದ್ದಾರೆ. ಈ ಬಗ್ಗೆ ಅವರೇ ಟ್ವೀಟ್ ಮಾಡಿದ್ದಾರೆ.

### ಸಾಲು ಸಾಲು ಮಸ್ಕ್ ಅವಾಂತರ

ಟ್ವಿಟರ್ ಲೋಗೊ ಬದಲಾವಣೆಯ ಮೂಲಕ ಮಸ್ಕ್ ಈಗ ಸುದ್ದಿಯಲ್ಲಿದ್ದು, ಇಂತಹದ್ದೇ ವಿಚಾರಗಳಿಂದ ಮತ್ತು ನಿರ್ಧಾರಗಳ ಮೂಲಕ ಸದಾ ಒಂದಿಲ್ಲೊಂದು ವಿವಾದಕ್ಕೀಡಾಗುತ್ತಾ ಬಂದಿದ್ದಾರೆ.

ಈಚೆಗೆ ಟ್ವಿಟರ್‌ನಲ್ಲಿ ಬ್ಲೂ ಟಿಕ್‌ಗೆ ಶುಲ್ಕ ವಿಧಿಸುವ 'ಫೀಚರ್' ಪರಿಚಯಿಸುವ ಮೂಲಕ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗಳಲ್ಲಿ ಬಹಳಷ್ಟು ಚರ್ಚೆಗೆ ಒಳಗಾಗಿದ್ದರು. ಇಷ್ಟೇ ಅಲ್ಲದೆ, ತಮ್ಮ ಉದ್ಯೋಗಿಗಳಿಗೆ 'ಮನೆಯಲ್ಲಿಯೇ ಇರಿ' ಎಂದು ಸಂದೇಶ ಕಳುಹಿಸುವ ಮೂಲಕ ಉದ್ಯೋಗ ಕಡಿತಗೊಳಿಸಿ ಉದ್ಯೋಗಿಗಳ ಕೆಂಗಣ್ಣಿಗೆ ಗುರಿಯಾಗಿದ್ದರು.

ಟ್ವಿಟರ್‌ನ ಸಿಇಒ ಖುರ್ಚಿ ಮೇಲೆ ಕುಳಿತಿರುವ ಮಸ್ಕ್ ತಮ್ಮ ಸ್ಥಾನಕ್ಕಾಗಿ ಮತ್ತೊಬ್ಬರನ್ನು ಹುಡುಕುತ್ತಿರುವುದಾಗಿ ಹೇಳಿ ಸುದ್ದಿಯಾಗಿದ್ದರು. ಏಪ್ರಿಲ್ ತಿಂಗಳಲ್ಲಿ ಬರೀ ವೆಬ್ ಆವೃತ್ತಿಗೆ ಮಾತ್ರ ಲೋಗೊ ಬದಲಾವಣೆಯಾಗಿದ್ದು, ಇದು 'ಏಪ್ರಿಲ್ ಫೂಲ್' ಸಹ ಇರಬಹುದು ಎಂದೂ ಹೇಳಲಾಗುತ್ತಿದೆ.

### 'ಸೋಷಿಯಲ್' ಚರ್ಚೆ ಜೋರು

ಲೊಗೊ ಬದಲಾದ ಬಗ್ಗೆ ಜಾಲತಾಣ ಬಳಕೆದಾರರು ಮೀಮ್ಸ್, ಟ್ರೋಲ್ ಮಾಡುವುದರ ಮೂಲಕ ಹಾಸ್ಯದ ಚರ್ಚೆ ನಡೆಯುತ್ತಿದೆ. 'ನಾಯಿಯಾಗಿ ಬದಲಾದ ಟ್ವಿಟರ್ ಹಕ್ಕಿ ಲೋಗೊ ಎರಡು ದಿನ ತಡವಾಗಿ ಮಾಡಿದ ಏಪ್ರಿಲ್ ಫೂಲ್' ಎಂದು ಕ್ರೈಡ್‌ಮ್ಯಾನ್ ಎಂಬ ಖಾತೆ ಹಾಸ್ಯವತ್ತಾಗಿ ಬರೆದುಕೊಂಡಿದೆ. ಅಲ್ಲದೆ, #Doge ಹ್ಯಾಸ್‌ಟ್ಯಾಗ್ ಬಳಸಿ ಮಾನವನ ದೇಹಕ್ಕೆ ನಾಯಿ ತಲೆ ಅಂಟಿಸಿದ ವಿವಿಧ ರೀತಿಯ ಪೋಸ್ಟರ್‌ಗಳನ್ನು ಟ್ವಿಟ್ಟರ್ ಬಳಕೆದಾರರು ಹಂಚಿಕೊಂಡು ಕುಟುಕುತ್ತಿದ್ದಾರೆ.

ಒಟ್ಟನಲ್ಲಿ ಹಲವು ಬಳಕೆದಾರರು ಟ್ವಿಟರ್ ಲಾಗಿನ್ ಆದ ತಕ್ಷಣ ಹೋಮ್ ಪೇಜಿನಲ್ಲಿ ನಾಯಿ ಲೋಗೊ ಕಂಡು ಬೆರಗಾಗುತ್ತಿದ್ದಾರೆ. ಅಸಲಿಗೆ ಈ ಲೋಗೊ ಬದಲಾವಣೆ ಹಿಂದಿನ ವಾಸ್ತವ ಏನೆಂದರೆ, 'ಟ್ವಿಟರ್ ಮಾಲೀಕ ಎಲಾನ್ ಮಸ್ಕ್ ಅವರ ಮುದ್ದಿನ ನಾಯಿಯಾದ 'ಶಿಬಾ ಇನು' ಮರಿ ಹಾಕಿದೆ. ಆ ಮರಿಗೆ 'ಫ್ಲಾಕಿ' ಎಂದು ಹೆಸರಿಟ್ಟಿದ್ದು, ಅದಕ್ಕಾಗಿ ಲೋಗೊ ಬದಲಿಸಲಾಗಿದೆ ಎನ್ನಲಾಗುತ್ತಿದೆ.